# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5028/2024 ಫ್ರಾಸಾ-09
ಚಾಸಾ-12

ದಿನಾಂಕಃ 01-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಹನುಮಂತಪ್ಪ |
| **ತಂದೆಯ / ಗಂಡನ ಹೆಸರು** | ಭೀಮಪ್ಪ |
| **ವಯಸ್ಸು** | 35 |
| **ಉದ್ಯೋಗ** | ಕೂಲಿ |
| **ವಾಸಸ್ಥಳ** | ದೇವರಬೆಟ್ಟ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ನಿಪಿ-5 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-5(ಸಿ) ಎಂದು ಗುರುತಿಸಲಾಯಿತು. ಸುಮಾರು 2 ವರ್ಷಗಳ ಹಿಂದೆ ದೇವರಬೆಟ್ಟ ಗ್ರಾಮದ ರಸ್ತೆಯಲ್ಲಿ ನಾನು ಸಹಿ ಹಾಕಿರುತ್ತೇನೆ. ನಿಪಿ-5 ರಲ್ಲಿ ಬರೆದ ವಿಷಯ ನನಗೆ ಗೊತ್ತಿರುವುದಿಲ್ಲ. ಯಾವ ವಿಚಾರಕ್ಕೆ ಪೊಲೀಸರು ನನ್ನ ಸಹಿ ತೆಗೆದುಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ಯಾವುದೇ ಸ್ಥಳಕ್ಕೆ ಕರೆದುಕೂಂಡು ಹೋಗಿರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಏನನ್ನೂ ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ನಿಪಿ-6 ಪೊಟೋ ನೋಡಿ ಅದರಲ್ಲಿ ತಮ್ಮ ಇರುವಿಕೆಯನ್ನು ಗುರುತಿಸಿರುತ್ತಾರೆ. ನಿಪಿ-6 ಪೊಟೋವನ್ನು ಆರೋಪಿ ಮನೆಯಲ್ಲಿ ತೆಗೆದಿರುತ್ತಾರೆ. ಸದರಿ ಪೋಟೋ ದಲ್ಲಿ ನನ್ನ ಜೊತೆ ಚಾಸಾ-10 ಮತ್ತು 11 ರವರು ಕಾಣಿಸುತ್ತಿದ್ದಾರೆ. ಸದರಿ ಸ್ಥಳದಲ್ಲಿ ಆರೋಪಿ ಹೆಂಡತಿ ತೀರಿಕೊಂಡಿರುತ್ತಾಳೆಂದು ಗೊತ್ತಾಯಿತು. ಆರೋಪಿ ಹೆಂಡತಿ ಯ್ಯಾಕೆ ತೀರಿಕೊಂಡಿರುತ್ತಾಳೆಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-**

ದಿ.05.04.2024 ರಂದು ಸಾಯಂಕಾಲ 5-00 ರಿಂದ 6-00 ಗಂಟೆ ಸಮಯದಲ್ಲಿ ರತ್ನಮ್ಮ ರವರು ವಾಸವಿದ್ದ ಶೀಟಿನ ಮನೆಯಲ್ಲಿ ಚಾಸಾ-10 ಓಬಳೇಶ ಹಾಜರಿದ್ದು , ರತ್ನಮ್ಮನ ಗಂಡ ಪ್ರತಿ ದಿನ ಕುಡಿದು ಬಂದು ಅವನ ಹೆಂಡತಿಗೆ ದಿನ ಹಿಂಸೆ ಕೊಡುತ್ತಿದ್ದರಿಂದ ಆತನ ಪ್ರಚೋದನೆಯಿಂದಲೇ ರತ್ನಮ್ಮ ಸೀರೆಯಿಂದ ನೇಣು ಹಾಕಿಕೊಂಡು ತೀರಿಕೊಂಡಿರುತ್ತಾಳೆ ಎಂದು ತಿಳಿಸಿದ ಮತ್ತು ಜಾಗವನ್ನು ತೋರಿಸಿದ್ದು ಸದರಿ ಜಾಗವನ್ನು ನಾವು ನೋಡಿದ್ದು ಪೋಲೀಸರು ನಿಪಿ-5 ರಂತೆ ಪಂಚನಾಮೆ ಮಾಡಿ, ಪಂಚನಾಮೆ ಕಾಲಕ್ಕೆ ಸೀರೆ ಅಮಾನತ್ತುಪಡಿಸಿಕೊಂಡು ನನ್ನ ಸಹಿ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ರತ್ನಮ್ಮ ಆರೋಪಿ ಕಿರುಕುಳದಿಂದೇ ನೇಣು ಹಾಕಿಕೊಂಡು ತೀರಿಕೊಂಡಿರುತ್ತಾಳೆಂದು ಗೊತ್ತಿದ್ದರೂ ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು ಶ್ರೀ. ಪಿ.ಎನ್.ಆರ್. ವಕೀಲರಿಂದ ಆರೋಪಿ ಪರವಾಗಿಃ-**

ಆರೋಪಿ ಮತ್ತು ನನ್ನ ಊರು ಒಂದೇ ಎಂದರೆ ನಿಜ. ಆರೋಪಿ ಮತ್ತು ಆತನ ಹೆಂಡತಿ ಸಂಬಂಧ ಹೇಗೆ ಇರುತ್ತದೆ ಎಂದು ನನಗೆ ಗೊತ್ತಿಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**